

# ಏಕನಾಯಕ

## ಚಿತ್ರ – ಬರಹ: ಡಾ. ನಾರಾಯಣ, ಎಸ್.

⇦ ಒಣಗಿ ರವಾನೆಗೆ ಅಣಿಗೊಳ್ಳುವ ಏಕನಾಯಕ ಬೇರು



ಪಶ್ಚಿಮ ಘಟ್ಟ ಸಾಲಿನ ನಿತ್ಯ ಹಸಿರು ಕಾಡಿನ ಹೊನ್ನಾವರ, ಭಟ್ಕಳ ಸೀಮೆಯಲ್ಲಿ ಹೇರಳ ಕಂಡುಬರುವ ಕುರುಚಲು ಪೊದೆ ಬಳ್ಳಿ ಏಕನಾಯಕ. ಅನೇಕ ಬಾರಿ ಕಾಡುಮರಗಳ ಸಲೀಸು ಬೆಳವಣಿಗೆಗೆ ಅನುವು ಮಾಡಿಕೊಡಲು ನೆಲದ ಪೊದರು, ಬಳ್ಳಿ ಸವರುವ ಪರಿಪಾಟ ಸಹ ವನ ಇಲಾಖೆ  ನಡೆಸುತ್ತದೆ. ಹಾಗೆ ಗುರುತಿಸದ ಅದೆಂತೋ ಬಳ್ಳಿ ಪೊದೆಗಳು ಅರಣ್ಯ ನ್ಯಾಯದಲ್ಲಿ ಮಣ್ಣುಗೂಡುವವು. ವನಪಾಲಕರು ಗುರುತಿಸದ ಅನೇಕಾನೇಕ ಕಾಡುಗಿಡ ಗುರುತಿಸುವ ಪರಂಪರೆ ಬರಿಗಾಲ ಸಸ್ಯ ಪಂಡಿತರು ಅರಿತ ಬಳ್ಳಿಗಳಲ್ಲಿ ಒಂದು ನಮ್ಮ ಕತೆಯ ನಾಯಕ ಏಕನಾಯಕ.



⇦ ಓಹಿಯೊ ತಲಪಿದ ಸಲೇಶಿಯ ಒಬ್ಲೊಂಗ ಸಸ್ಯ ಮಾದರಿ

ವಾಸ್ತವದ ಸಂಗತಿ ಎಂದರೆ ಆಯುರ್ವೇದ ಸಾಹಿತ್ಯ ಹೆಚ್ಚಾಗಿ ತಿಳಿಸದ ಏಕನಾಯಕ ನಿಜಕ್ಕೂ ಜನಪದರ ಬತ್ತದ ಬತ್ತಳಿಕೆಯ ರಾಮಬಾಣ. ಸಕ್ಕರೆ ಕಾಯಿಲೆ ಮಂದಿಗೆ ಅಕ್ಕರೆಯ ಬೇರು ಮದ್ದು. ಇಂದು ಯಾವುದೇ ಮದುಮೇಹ ನಿವಾರಕ ಮಾತ್ರೆ, ಪುಡಿಗಳನ್ನು ನೋಡಿ. ಏಕನಾಯಕನಿಗಿದೆ ಅಲ್ಲಿ ಪ್ರಾಶಸ್ತ್ಯ. ಹಾಗಾಗಿ  ಕಾಡಿನ ನಾಯಕ ನಾಡಿಗೆ ಸರಬರಾಜು ಆಗಿದ್ದರಲ್ಲಿ ಏನೂ ಆಶ್ಚರ್ಯ ಇಲ್ಲ. ಏಕೆಂದರೆ ದಿನೇ ದಿನೇ ಡಯಾಬಿಟಿಸ್ ರೋಗಿಗಳ ಸಂಖ್ಯೆ ಏರು ಮುಖ.

ಬಲ್ಲವರೇ ಬಲ್ಲರು ಕಲ್ಲು ಸಕ್ಕರೆ ಸವಿ ಎಂಬ ದಾಸವಾಣಿ ಇದೆ. ಹಾಗೆಯೇ ಕಾಡಿನ ಮರ ಗಿಡ ಬಳ್ಳಿ ಗುರುತಿಸುವ ಮಂದಿ ಇಂದು ವಿರಳ. ಮೋಪು ಮರ ಮಾತ್ರ ನಮಗೆ ಗೊತ್ತು ಎನ್ನುವ ವನಪಾಲಕರ ಉದಾಸೀನ ನಾಡಪಂಡಿತರ ಪಾಲಿಗಿಂದು ವರ. ಆದರೆ ಇಂದು ಈ ಬರಿಗಾಲ ಸಸ್ಯಶಾಸ್ತ್ರಿಗಳ ಸಂಖ್ಯೆ ಸಹ ಇಳಿಮುಖ. ಅದೇನೇ ಇರಲಿ. ಏಕನಾಯಕ ಹೇಗಿದೆ ಅರಿಯೋಣ.

ಎದುರು ಬದಿರೆಲೆಯ ಅತಂತ್ರ ಯಾ ಸ್ವತಂತ್ರ ಬಳ್ಳಿ. ಎಲೆ ಕಂಕುಳಿನ ಹೂ ದಂಡೆ. ಅಲ್ಲರಳುವ ಒಂದೆರಡು ಹೂ. ಮುಂದೆ ಅದೇ ಕಿರಿ ತೊಟ್ಟಿನ ಗುಂಡನೆ ಕಾಯಾಗಿ ಪರಿವರ್ತಿತ. ತಟ್ಟನೆ ನೋಡಿದರೆ ಶ್ರೀಗಂದ ನೆನಪಿಸುವ ಎಲೆ ಕಾಯಿ ರಚನೆ. ಹಿಪ್ಪೊಕ್ರೆಟಿಯೇಸಿ ಎಂಬ ಸಸ್ಯಕುಲದ ಮೂರು, ನಾಲ್ಕು ಪ್ರಭೇದಗಳಿಗೆ ಏಕನಾಯಕ ಎಂಬ ಗುರುತು ಹಚ್ಚುವ ಪರಂಪರೆ ಪಂಡಿತರು ಎಲ್ಲ ಪ್ರಭೇದವನ್ನು ಸಕ್ಕರೆ ಕಾಯಿಲೆ ನೀಗಲು ಬಳಸುವರು. ಅಂದಹಾಗೆ ಪೊದರು ಅಗೆದು

ಬೇರು ಕಿತ್ತಳೆ ಕಿತ್ತಳೆ ಬಣ್ಣದ, ಒಳ್ಳೆಯ ಮಾಂಸಲ ಬೇರುಗಳವು. ಒಂದೆರಡು ದಶಕದ ಬಲಿತ ಪೊದರಿನ ಬೇರು ತೊಡೆ ಗಾತ್ರವೂ ಇದ್ದೀತು. ಹೊರಗೆ ಕಿತ್ತಲೆ ಯಾ ಗೋದಿ ನಾಗರ ಬಣ್ಣ. ಒಳಗೆ ಬೀಟ್ ರೂಟ್ ರೀತಿಯ ಮಿದು ರಚನೆ. ಅದೇ ತೆರನ ಚಕ್ರ ಆಕಾರ. ಹಾಗಾಗಿ ದೇವನಾಗರಿಯಲ್ಲಿ ಸಪ್ತ ಚಕ್ರಾ ಎಂಬ ಹೆಸರಿಡಲಾಯಿತು.ಇತರರು ಮದು ಫಲ ಎಂದೂ ಕರೆವರು.

ಸಲೇಶಿಯಾ ಚಯಿನೆನ್ಸಿಸ್, ಸಲೇಶಿಯಾ ಮ್ಯಾಕ್ರೊಸ್ಪರ್ಮ ಮತ್ತು ಸಲೇಶಿಯ ಒಬ್ಲೊಂಗಾ ಎಂಬ ಮೂರು ಪ್ರಭೇದ ಕರ್ನಾಟಕದ ಕರಾವಳಿ ಕಾಡಿನ ಏಕನಾಯಕರು. ಚೆರು ಕೊರಂತಿ,  ಆಣ್ ಕೊರಂತಿ ಮತ್ತು ಪೊಣ್ ಕೊರಂತಿ ಎಂಬ ಮಲೆಯಾಳಿ ಹೆಸರುಗಳು ಕ್ರಮವಾಗಿ ಈ ಪ್ರಭೇದಗಳಿಗಿವೆ. ಸಪ್ತರಂಗಿ ಎಂಬ ವ್ಯಾಪಾರಿ ಹೆಸರಿನಡಿ ಸಹ ಬೇರು ವಹಿವಾಟುಗೊಳ್ಳುತ್ತಿದೆ.

ಗರ್ಭ ಕಳೆಯುವ, ಮುಟ್ಟಿನ ಎಲ್ಲ ಬಗೆಯ ತೊಂದರೆ ನೀಗುವ ಹಾಗು ಸಿಫಿಲಿಸ್, ಗೊನೊರಿಯಾ ಗುಪ್ತ ರೋಗ ಗುಣಪಡಿಸುವ ಉಪಕಾರ ಈ ಏಕನಾಯಕನದು. ಸಕ್ಕರೆ ರೋಗದಲ್ಲಿ ಬಳಕೆ ಮಾಡಿದ ಸ್ಂದರ್ಭಗಳಲ್ಲಿ ವಿಸ್ಮಯಕಾರಿ ಫಲಿತಾಂಶ ಕೇವಲ ನಮ್ಮಲ್ಲಿ ಮಾತ್ರ ಅಲ್ಲ. ಅಮೆರಿಕೆಯ ಕೊಲಂಬಸ್ ನ ಓಹಿಯೋ ವಿಶ್ವವಿದ್ಯಾಲಯದಲ್ಲಿ ಬೆಳಕಿಗೆ ಬಂದಿದೆ. ಅದು ಹೇಗೆ ನಮ್ಮ ಕಾಡಿನ ಸಲೇಶಿಯ ಒಬ್ಲೊಂಗಾ ಬೇರು ಒಹಿಯೋ ತಲಪಿತೊ ನಾನರಿಯೆ. ಅಲ್ಲಿ ೩೯ ಮಂದಿ ಸಕ್ಕರೆ ಕಾಯಿಲೆ ರೋಗಿಗಳು ಮಾತ್ರೆಗೆ ಬೇಸತ್ತು ಏಕನಾಯಕ ಬೇರಿನ ಚಹಾ ಅಕ್ಕರೆಯಿಂದ ಸೇವಿಸಿದರಂತೆ. ಭೋಜನ ಅನಂತರದ ಅವರ ಗ್ಲುಕೋಸು ಪ್ರಮಾಣ ಸರಾಸರಿ ೩೦ ಮಿ.ಗ್ರಾಂ.! ಈ ಪ್ರಯೋಗ ನಡೆಸಿದಾತ ಹರ್ಟ್ಸ್ಲೆ ರ್. ಆತನ ಈಗಿನ ಚಿಂತೆ ಏನು ಗೊತ್ತೆ? ಸಲೇಶಿಯಾ ಒಬ್ಲೊಂಗಾ ಅಮೆರಿಕೆಯಲ್ಲಿ ಈಗ ಹೆಚ್ಚಾಗಿ ಸಿಗುತ್ತಿಲ್ಲ. ಬೆಳೆಯುವುದಂತೂ ಮೊದಲೇ ಇಲ್ಲ. ಬಹುಶ ಇದೇ ಕಾರಣಕ್ಕೆ ನಮ್ಮ ಕಾಡಿನ ಏಕನಾಯಕನಿಗೆ ಏಕಾಏಕಿ ಶುಕ್ರದೆಸೆ ವಕ್ರಿಸಿದ್ದು. ಮುಂದಿನ ಬೆಳವಣಿಗೆ ನೀವೇ ಊಹಿಸಬಲ್ಲಿರಿ. ಇದೇ ಮಹನೀಯ ಏಕನಾಯಕ ಬೇರಿನ ಹಕ್ಕು ಸ್ವಾಮ್ಯ ಬೇಡಿಯಾನು. ಅದೇನೆ ಇರಲಿ. ಕಾಡಿನ ಗಿಡ, ಮರ,ಬಳ್ಳಿಗಳ ಪರಿಚಯ, ಬಳಕೆಯ ಮಾಹಿತಿ, ಉದಾಹರಣೆ ಸಹ ಇಂದು ಸಂರಕ್ಷಣೆಯಂತೆಯೆ ಮುಖ್ಯ ಎಂದು ನಮಗರಿವಾಗಿದೆ. ಅಂತಹ ನಿಟ್ಟಿನಲ್ಲಿ ಜರಗಿಸುವ ಗಂಭೀರ ಕ್ರಮಗಳು ನಮಗಿಂದು ಬೇಕಾಗಿವೆ. ಜತೆಗೆ ಏಕನಾಯಕನಂತಹ ಅಳಿವಿನಂಚಿನ ಸಸ್ಯಜಾತಿಗಳ ಹೇರಳ ಮರು ಉತ್ಪಾದನೆ ಸಹ ಅನಿವಾರ್ಯ. ಜನನಾಯಕರ ಜತೆ ಜನರೂ ಸಹಕರಿಸಬೇಕಾಗಿದೆ. ಕಾಡಿನ ಸಂಪತ್ತಿನ ಹೊಣೆಗಾರಿಕೆ ಎಲ್ಲರ ಮೇಲಿದೆ. ಇಲಾಖೆಯದು ಮಾತ್ರ ಅಲ್ಲ ಎಂಬುದು ನಮಗೆ ಮನವರಿಕೆ ಆಗಬೇಕಾಗಿದೆ.

***